ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಧಾರಣಾಶಕ್ತಿ ಅಧ್ಯಯನ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಧಾರಣಾಶಕ್ತಿಯ ಅಧ್ಯಯನ ಮಾಡಲು ಉಲ್ಲೇಖ ನಿಬಂಧನೆಗಳನ್ನು ಸಿದ್ದಪಡಿಸಲಾಗಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಧಾರಣಾಶಕ್ತಿಯ ಅಧ್ಯಯನ ಕಾರ್ಯ ಮುಗಿದ ನಂತರ ಈ ಬಗ್ಗೆ ಪರ್ಯಾಲೋಚನೆ ಮಾಡಿ ಸರ್ಕಾರ ಸೂಕ್ತ ಕ್ರಮವನ್ನು ಜರುಗಿಸಲಾಗುವುದು.

ನೆಡುತೋಪುಗಳ ಕಟಾವು

1301 (1524) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಮಾಜಿಕ ಅರಣ್ಯ ಮತ್ತಿತರ ಯೋಜನೆಯಡಿ ಬೆಳೆದ ನೆಡುತೋಪುಗಳ ಕಟಾವು ಮಾಡುವಾಗ ಸ್ಥಳೀಯರ ಆಗತ್ಯ ಪೂರೈಕೆ ಬಗ್ಗೆ ಸರ್ಕಾರದವರು ಗಮನ ಹರಿಸುತ್ತಿದ್ದಾರೆಯೇ? ಹಾಗಿದ್ದಲ್ಲಿ ಈ ಬಗ್ಗೆ ಸರಕಾರ ತೆಗೆದುಕೊಂಡ ಕ್ರಮಗಳೇನು: ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳುವುದೇ?

ಆ) ಇಂತ ಸಂಪನ್ಮೂಲಗಳ ಮೇಲಿನ ಆಯ್ಕೆ ಪ್ರಥಮವು ಸ್ಥಳೀಯರದ್ದಾಗಿರುವುದರಿಂದ ಅವರುಗಳಿಗೆ ಆದ್ಯತೆಯನ್ನು ಕೊಡಲು ಸರಕಾರವು ಇಚ್ಛಿಸುತ್ತದೆಯೇ?

ಇ) ಕಾಡಿನ ಉತ್ಪತ್ತಿಯ ಸಂಗ್ರಹದ ಹಕ್ಕನ್ನು ಗಿರಿಜನರಿಗೆ ಮತ್ತು ಗ್ರಾಮ ಅರಣ್ಯ ಸಮಿತಿಗೆ ಕೊಡಲು ಸರಕಾರವು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ನೆಡುತೋಪುಗಳನ್ನು ಕಟಾವು ಮಾಡುವಾಗ ಉಳಿದ ರಂಭೆ ಕೊಂಬೆಗಳನ್ನು ಸ್ಥಳೀಯರು ಉಪಯೋಗಮಾಡಲಿಕ್ಕೆ ಯಾವುದೆ ಆತಂಕ ಮಾಡಿಲ್ಲ. ಈ ದಿಶೆಯಲ್ಲಿ ತೆಗೆದುಕೊಂಡ ಕೆಲವು ಕ್ರಮಗಳೆಂದರೆ ಜಂಟಿ ಅರಣ್ಯ ಮತ್ತು ನಿರ್ವಹಣೆ (ಜೆಫ್‌ಪಿಎಂ) ಎಂಬ ಯೋಜನೆಯು ರಾಜ್ಯದಲ್ಲಿ ಏಪ್ರಿಲ್ 1993ರ ಮಾಹೆಯಿಂದ ಅನುಷ್ಠಾನದಲ್ಲಿದೆ. ಈ ಯೋಜನೆಯಡಿಯಲ್ಲಿ ಗ್ರಾಮದ ಅರಣ್ಯ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಆಸಕ್ತರಿದ್ದ ಸ್ಥಳೀಯ ಜನರು ಗ್ರಾಮ ಅರಣ್ಯ ಸಮಿತಿಗಳನ್ನು ರೂಪಿಸಿ ಕೊಂಡು ಆ ಸಮಿತಿ ಮುಖಾಂತರ ಅವರ ಆಗತ್ಯ ಬೇಡಿಕೆಗಳನ್ನು ಪೂರೈಸಿ ಕೊಳ್ಳಬಹುದಾಗಿದೆ. ಈ ಯೋಜನೆಡಿ ನೆಡುತೋಪುಗಳನ್ನು ಕಟಾವು ಮಾಡಿದಾಗ ಅದರಿಂದ ಬಂದ ಉತ್ಪನ್ನದಲ್ಲಿ ಅರ್ಧ ಭಾಗ ಗ್ರಾಮ ಅರಣ್ಯ ಸಮಿತಿಗೂ ಮತ್ತು ಅರ್ಧ ಭಾಗ ಸರ್ಕಾರಕ್ಕೂ ಸೇರುತ್ತದೆ. ಗ್ರಾಮ ಅರಣ್ಯ ಸಮಿತಿಗೆ ಸಿಗುವ ಅರ್ಧ ಭಾಗದಲ್ಲಿ ಶೇಕಡ 50ರಷ್ಟನ್ನು ಗ್ರಾಮ ಅರಣ್ಯ ಅಭಿವೃದ್ಧಿಗೂ ಹಾಗೂ ಇನ್ನುಳಿದ ಶೇಕಡ 50ರಷ್ಟನ್ನು ಗ್ರಾಮ ಅರಣ್ಯ ಸಮಿತಿ ಸದಸ್ಯರು ತಮಗೆ ಬೇಕಾದ ರೀತಿಯಲ್ಲಿ ಉಪಯೋಗಿಸಿ ಕೊಳ್ಳಬಹುದಾಗಿದೆ.

ಆ) ಸರ್ಕಾರ ಸ್ಥಳೀಯರಿಗೆ ಆದ್ಯತೆಯನ್ನು ಕೊಡುವ ದಿಶೆಯಲ್ಲಿಯೇ ಜಂಟಿ ಅರಣ್ಯ ಯೋಜನೆ ಮತ್ತು ಕಾರ್ಯ ನಿರ್ವಹಣೆ (ಜೆಎಫ್‌ಪಿಎಂ) ಹಮ್ಮಿಕೊಂಡಿದೆ. ಅದರಿಂದ ಸಂಪನ್ಮೂಲಗಳ ಅಭಿವೃದ್ಧಿಗಳು ಮತ್ತು ಅವುಗಳ ಉತ್ತಮ ರೀತಿಯ ವಿನಿಯೋಗಕ್ಕೂ ಗ್ರಾಮೀಣ ಜನತೆಗೆ ಅನುಕೂಲವಾಗುತ್ತದೆ.

ಇ) ಕಾಡಿನ ಉತ್ಪತ್ತಿಯ ಸಂಗ್ರಹದ ಹಕ್ಕನ್ನು ಸಂಪೂರ್ಣವಾಗಿ ಗಿರಿಜನರಿಗೆ ನೀಡಲಾಗುತ್ತಿಲ್ಲ. ಆದರೆ ಕೆಲವು ಕಿರು ಅರಣ್ಯ ಉತ್ಪತ್ತಿ ಸಂಗ್ರಹವನ್ನು ಗಿರಿಜನರಿಗೆ ಅವರ ಸಂಘದ ಮುಖಾಂತರ ಸಂಗ್ರಹಣೆ ಮಾಡಿಕೊಡಲಿಕ್ಕೆ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಗ್ರಾಮ ಅರಣ್ಯ ಸಮಿತಿಗೆ ನಿರ್ವಹಣೆಗಾಗಿ ಸೀಮಿತಗೊಳಿಸಿದ ಪ್ರದೇಶದಿಂದ ಕಿರು ಅರಣ್ಯ ಉತ್ಪತ್ತಿಯನ್ನು ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಶೇಖರಿಸಿಕೊಳ್ಳಬಹುದಾಗಿದೆ.

ರಾಜ್ಯದಲ್ಲಿ ರಂಗಮಂದಿರ ನಿರ್ಮಾಣ

1303 (1856) ಶ್ರೀ ಎಸ್.ಹೆಚ್. ಪುಟ್ಟರಂಗನಾಥ (ಬೇಲೂರು) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿಯೊಂದು ಫೌಢ್ಯ ಶಾಲೆಗೂ ರಂಗಮಂದಿರ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಸನ ಜಿಲ್ಲೆಯಲ್ಲಿ ತಮ್ಮ ಇಲಾಖೆಯಿಂದ ಎಷ್ಟು ರಂಗಮಂದಿರ ನಿರ್ಮಾಣವಾಗಿದೆ; ಅದರಲ್ಲಿ ಬೇಲೂರು ತಾಲ್ಲೂಕಿನಲ್ಲಿ ಎಷ್ಟಾಗಿದೆ?

ಶ್ರೀ ಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯರು) :

ಅ) ಇಲ್ಲ

ಆ) 1) ಹಾಸನದಲ್ಲಿ ಜಿಲ್ಲಾ ರಂಗಮಂದಿರ - 1

2) ಬಯಲು ರಂಗಮಂದಿರ - 6

3) ಬೇಲೂರು ತಾಲ್ಲೂಕಿನಲ್ಲಿ ಬಯಲು ರಂಗ ಮಂದಿರ ನಿರ್ಮಿಸಲು ಪ್ರಸ್ತಾವನೆ ಪರಿ ಶೀಲನೆಯಲ್ಲಿದೆ.

ಬೇಲೂರು - ಹಳೇಬೀಡು ಪ್ರವಾಸಿ ಕೇಂದ್ರಗಳ ರಸ್ತೆ ಅಭಿವೃದ್ಧಿ

1305 (1858) ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೇಲೂರು ತಾಲ್ಲೂಕಿನ ಹಳೇಬೀಡು ಮತ್ತು ಬೇಲೂರು ಪ್ರವಾಸಿ ಕೇಂದ್ರಗಳ ರಸ್ತೆ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?